ದಿನಾಂಕಃ **03-03-2025** ರಂದು ಸಾಕ್ಷಿಯು ನ್ಯಾಯಾಲಯಕ್ಕೆ ಹಾಜರಾಗಿದ್ದು ಪ್ರಮಾಣವಚನ ಬೋಧಿಸಲಾಯಿತು.

<u>ಪಾಟೀ ಸವಾಲುಃ ಪ್ರತಿವಾದಿ-**10** ಪರ ವಕೀಲರಾದ ಶ್ರೀ ಹೆಚ್.ಎಂ.ಎನ್.ರವರಿಂದ ಃ</u>

**1.** ದಾವಾ ಸ್ವತ್ತನ್ನು ಮೂಲತಹ ತಹಶೀಲ್ದಾರ್ ರವರು ಭೂ-ಸ್ವಾದೀನಪಡಿಸಿಕೊಂಡರು. ದಾವಾ ಸ್ವತ್ತು 6 ನೇ ಪ್ರತಿವಾದಿಯ ಹೆಸರಿನಲ್ಲಿ ಭೂ-ಸ್ವಾದೀನವಾಗಿತ್ತು ಎಂದರೆ ಸರಿಯಲ್ಲ. 10 ನೇ ಪ್ರತಿವಾದಿಯ ವಿರುದ್ದ ಸ್ವಾದೀನವಾಗಿರುವ ಸ್ವತ್ತಿಗೆ ಪರಿಹಾರ ಕೊಡಿ ಎಂದು ಈ ದಾವೆಯನ್ನು ಹಾಕಿದ್ದೇನೆ. ದಿಃ17.10.2003 ಮತ್ತು ದಿಃ07.04.2021 ರ ಸರ್ಕಾರದ ಸುತ್ತೋಲೆಯ ಅನ್ವಯ 10 ನೇ ಪ್ರತಿವಾದಿಯು ನಮಗೆ ಯಾವುದೇ ಪರಿಹಾರ ಕೊಡಲು ಹಕ್ಕುಳವರಲ್ಲ ಎಂದರೆ ಸರಿಯಲ್ಲ. ಸಾಕ್ಷಿಯು 10 ನೇ ಪ್ರತಿವಾದಿಯು ಸರ್ಕಾರದ ಭಾಗವಾಗಿರುವ ಕಾರಣ ಪ್ರತಿವಾದಿಯಾಗಿ ಮಾಡಿದ್ದೇನೆ ಎಂದು ನುಡಿಯುತ್ತಾರೆ. ದಿಃ17.10.2003 ಮತ್ತು ದಿಃ07.04.2021 ರ ಸರ್ಕಾರದ ಸುತ್ತೋಲೆಯನ್ನು ನಾನು ಪರಿಶೀಲಿಸಿದ್ದೇನೆ. ಸದರಿ ಸುತ್ತೋಲೆಗಳಲ್ಲಿ 10 ನೇ ಪ್ರತಿವಾದಿಯು ಪರಿಹಾರ ಕೊಡಲು ಅಧಿಕಾರ ಹೊಂದಿದ್ದಾರೆಂದು ಹೇಳಿದ್ದಾರೆ ಎಂದು ಸಾಕ್ಷಿಯು ನುಡಿಯುತ್ತಾರೆ. ದಿಃ18.08.2011 ರಂದು 6 ನೇ ಪ್ರತಿವಾದಿಯು 10 ನೇ ಪ್ರತಿವಾದಿಗೆ ಒಳಚರಂಡಿ ಕಾಮಗಾರಿಗೆ ಪತ್ರ ಬರೆದಿದ್ದು, ಸದರಿ ಒಳಚರಂಡಿ ಕಾಮಗಾರಿಯನ್ನು ಅನುಷ್ಠಾನಗೊಳಿಸುವ ಅಧಿಕಾರ ಮಾತ್ರ 10 ನೇ ಪ್ರತಿವಾದಿಗೆ ಇದೆ ಎಂದರೆ ಸರಿಯಲ್ಲ. ವಾದಿಗಳಿಗೆ ಭೂ-ಪರಿಹಾರದ ಮೊತ್ತವನ್ನು ಕೊಡುವಂತಹ ಬಾದ್ಯತೆ 10 ನೇ ಪ್ರತಿವಾದಿಗೆ ಇಲ್ಲ ಎಂದರೆ ಸರಿಯಲ್ಲ. ಭೂ-ಪರಿಹಾರದ ಮೊತ್ತವನ್ನು ಕೊಡಲು 10 ನೇ ಪ್ರತಿವಾದಿಯು ಯಾವುದೇ ಫಲಾನುಭವಿ ಅಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆ ಃ ಇಲ್ಲ.

(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

**ಓ. ಹೇ. ಕೇ. ಸ. ಇದೆ.**

**ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ.,**

**ಸಾಕ್ಷಿದಾರರ ಸಹಿ.** **ಪಾಂಡವಪುರ.**